

## ವಿದ್ಯಾರ್ಥಿಗಳೇ, ಗಮನಿಸಿ

# ಏಕಾಗ್ರತೆಗೆ ಉಪಾಯಗಳು–ಆಸಕ್ತಿ

ಏಕಾಗ್ರತೆಯ ಸಾಧನೆಗೆ ಬೇಕಾದ ಬಹು ಮುಖ್ಯವಾದ ಅಂಶವೆಂದರೆ ಆಸಕ್ತಿ. ನಾವು ಓದುವ ವಿಷಯವನ್ನು ಇಷ್ಟಪಡುವುದು, ಪ್ರೀತಿಸುವುದು. ಅದನ್ನೇ ಸಾಧ್ಯವಾದಷ್ಟು ಆಲೋಚಿಸುತ್ತಿರುವುದು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಎಲ್ಲರ ಮನಸ್ಸೂ ಕೆಲವು ಸಮಯ ಏಕಾಗ್ರವಾಗುವುದು. ನಾವು ಪ್ರೀತಿಸುವ ವಸ್ತುವಿನ ಮೇಲೆ ಮನಸ್ಸನ್ನು ಏಕಾಗ್ರಗೊಳಿಸುತ್ತೇವೆ. ಯಾವ ವಸ್ತುವಿನ ಮೇಲೆ ನಮಗೆ ಏಕಾಗ್ರಗೊಳಿಸಲು ಸಾಧ್ಯವಾಗುತ್ತದೆಯೋ, ಅದನ್ನು ಪ್ರೀತಿಸಲು ಕಲಿಯುತ್ತೇವೆ."

ಒಂದು ವಿಷಯದ ಮೇಲೆ ನಮಗೆ ತೀವ್ರ ಆಸಕ್ತಿಯಿದ್ದರೆ, ಗಾಢ ಏಕಾಗ್ರತೆಯೂ ತಾನೇ ತಾನಾಗಿ ಬರುತ್ತದೆ ಎಂದು ಇದರ ಅರ್ಥ. ನಮಗೆ ಆಸಕ್ತಿಯೇ ಇಲ್ಲದಿದ್ದರೆ? ಆಸಕ್ತಿಯನ್ನು ಬೆಳೆಸಿಕೊಳ್ಳಲು ಯತ್ನಿಸಬೇಕು. ಅದಕ್ಕಾಗಿ ಮತ್ತೆ ಮತ್ತೆ ಗಮನವಿಟ್ಟು ಓದಿ, ಅರ್ಥಮಾಡಿಕೊಂಡು, ವಿಷಯವನ್ನು ಚೆನ್ನಾಗಿ ಅರಿತುಕೊಳ್ಳಲು ಪ್ರಯತ್ನಿಸಬೇಕು. ಅಂದರೆ ಏಕಾಗ್ರತೆಯನ್ನು ಬೆಳೆಸಿಕೊಳ್ಳಬೇಕು. ಆಗ, ಸ್ವಾಮೀಜಿಯವರು ಹೇಳುವಂತೆ ಆಸಕ್ತಿ ತಾನೇತಾನಾಗಿ ಬರುತ್ತದೆ. ಇದರರ್ಥ ಏನು ಗೊತ್ತೇ? ಆಸಕ್ತಿ ಇಲ್ಲವೆಂದು ಓದುವುದನ್ನು ಬಿಡಬಾರದು ಎಂದು.

ಹೀಗೆ 'ಆಸಕ್ತಿ', 'ಏಕಾಗ್ರತೆ' ಇವೆರಡೂ ಪರಸ್ಪರ ಪೂರಕಗಳು. ಆಸಕ್ತಿ ಇದ್ದರೆ ಎಷ್ಟು ತೀಕ್ಷ್ಣ ಏಕಾಗ್ರತೆ ಬರುತ್ತದೆ ಎನ್ನುವುದಕ್ಕೆ ಒಂದು ಬೋಧಪೂರ್ಣವಾದ ಕಥೆ ಹೀಗಿದೆ:

ವಾಚಸ್ಪತಿ ಮಿಶ್ರ ಎನ್ನುವವರು ದೊಡ್ಡ ವಿದ್ವಾಂಸರು. ಯುವಕರಿದ್ದಾಗ ಅವರಿಗೆ ಮದುವೆಯಾಯಿತು. ಸ್ವಲ್ಪ ಕಾಲದಲ್ಲಿಯೇ ಅವರಿಗೆ ಒಂದು ಬಯಕೆ ಉಂಟಾಯಿತು. ಭಗವಾನ್ ವ್ಯಾಸರು ಬ್ರಹ್ಮಸೂತ್ರಗಳನ್ನು ಬರೆದಿದ್ದಾರೆ. ಅವು ಉಪನಿಷತ್ತಿನ ಅರ್ಥವನ್ನು ತಿಳಿಹೇಳುತ್ತವೆ. ಈ ಸೂತ್ರಗಳಿಗೆ ಶ್ರೀಶಂಕರಾಚಾರ್ಯರು ಸುಂದರವಾದ ಭಾಷ್ಯವನ್ನು ಬರೆದಿದ್ದಾರೆ. ಅದಕ್ಕೆ ವಿವರಣೆಯನ್ನು ಬರೆಯಬೇಕು ಎಂದು ವಾಚಸ್ಪತಿ ಮಿಶ್ರರ ಆಸೆ. ಸರಿ, ಬರೆಯಲು ಆರಂಭ ಮಾಡಿದರು. ಪ್ರತಿದಿನವೂ ಬೆಳಗ್ಗೆ ಎದ್ದು ನದಿಗೆ ಹೋಗಿ ಸ್ನಾನ ಮಾಡಿ ಬರುವರು. ಸಂಧ್ಯಾವಂದನೆ ಮತ್ತು ಪೂಜೆಗಳನ್ನು ಪೂರೈಸುವರು. ಬರೆಯುವುದಕ್ಕೆ ಕುಳಿತುಕೊಳ್ಳುವರು. ಮಧ್ಯಾಹ್ನ ಊಟ ತಯಾರಾಗಿರುತ್ತಿತ್ತು. ಊಟ ಮಾಡುವರು. ಮತ್ತೆ ಬರೆಯಲು ಕೂಡುವರು. ಹೀಗೆ ದಿನಗಟ್ಟಲೆ, ತಿಂಗಳುಗಟ್ಟಲೆ, ವರ್ಷಗಟ್ಟಲೆ ಬರೆದರು. ಹಲವಾರು ವರ್ಷಗಳಾದ ನಂತರ ಪುಸ್ತಕ ಪೂರ್ತಿಯಾಯಿತು. ಸಂತೃಪ್ತಿಯಿಂದ ತಲೆಯೆತ್ತಿ ಅತ್ತಿತ್ತ ನೋಡಿದರು. ಮನೆಯ ಮೂಲೆಯಲ್ಲಿ ಒಬ್ಬ ಮುದುಕಿ ಕುಳಿತಿದ್ದಳು. "ನೀನು ಯಾರು?" ಎಂದರು. "ನಾನು ನಿಮ್ಮ ಪತ್ನಿ" ಎಂದಳು ಆಕೆ. ಪುಸ್ತಕವನ್ನು ಬರೆಯುವ ಆಲೋಚನೆಯಲ್ಲಿ ಅವರು ತಮ್ಮ ಪತ್ನಿಯನ್ನೇ ಮರೆತುಬಿಟ್ಟಿದ್ದರು. ಆದರೆ ಪತ್ನಿ ಪತಿವ್ರತೆ. ತನ್ನ ಗಂಡನಿಗೆ ಸ್ವಲ್ಪವೂ ತೊಂದರೆಯಾಗದಂತೆ ನೋಡಿಕೊಂಡಿದ್ದಳು. ವಾಚಸ್ಪತಿ ಮಿಶ್ರರೂ ಅಷ್ಟುಹೊತ್ತಿಗೆ ಮುದುಕರಾಗಿದ್ದರು. ತಮ್ಮ ಪತ್ನಿಯನ್ನು ತಾವು ಸರಿಯಾಗಿ ನೋಡಿಕೊಳ್ಳಲಿಲ್ಲ ಎಂದು ಅವರಿಗೆ ದುಃಖವಾಯಿತು. ತಮ್ಮ ಪತ್ನಿಯ ತ್ಯಾಗದಿಂದಲೇ ತಾವು ಪುಸ್ತಕವನ್ನು ಬರೆಯಲು ಸಾಧ್ಯವಾಯಿತು ಎಂದು ಅವರು ಮನಗಂಡರು. ಅದಕ್ಕೆಂದೇ ಆ ಪುಸ್ತಕಕ್ಕೆ ತಮ್ಮ ಪತ್ನಿಯ ಹೆಸರನ್ನೇ ಇಟ್ಟರು. ಪತ್ನಿಯ ಹೆಸರು 'ಭಾಮತೀ' ಎಂದು. ಅವರ ಪುಸ್ತಕವೂ 'ಭಾಮತೀ' ಎಂದೇ ಪ್ರಸಿದ್ಧವಾಯಿತು.

ನೋಡಿದಿರಾ? ಆಸಕ್ತಿ ಇದ್ದರೆ ಏಕಾಗ್ರತೆ ಹೇಗೆ ಸಿದ್ಧಿಸುತ್ತದೆ ಎಂದು. ಹಾಗೆಯೇ, "ನಾನು ದಡ್ಡ, ನನಗೇನೂ ಬರುವುದಿಲ್ಲ" ಎಂದುಕೊಳ್ಳಬಾರದು. ದಡ್ಡನಾದವನೂ ಬುದ್ಧಿವಂತನಾಗಲು ಸಾಧ್ಯ. ಇದನ್ನು ಈ ಮುಂದಿನ ಕಥೆ ಚೆನ್ನಾಗಿ ತಿಳಿಸಿಕೊಡುತ್ತದೆ:

ಇದು ಸುಮಾರು ೩,೦೦೦ ವರ್ಷಗಳ ಹಿಂದಿನ ಕಥೆ. ಒಂದು ಗುರುಕುಲ. ಅಲ್ಲಿ ಒಬ್ಬ ವಿದ್ಯಾರ್ಥಿ. ಅವನು ಶತದಡ್ಡ. ಗುರುಗಳು ಏನು ಹೇಳಿಕೊಟ್ಟರೂ ಅವನಿಗೆ ಅರ್ಥವಾಗುತ್ತಿರಲಿಲ್ಲ. ಹಾಗೆಯೇ ೧೨ ವರ್ಷಗಳ ಕಾಲ ಕಳೆದುಹೋಯಿತು. ಗುರುಗಳು ಅವನಿಗೆ ಹೇಳಿದರು, "ಅಪ್ಪಾ, ನಿನ್ನ ಕೈಯಲ್ಲಿ ವಿದ್ಯಾರೇಖೆ ಇಲ್ಲ. ನಿನಗೆ ವಿದ್ಯೆ ಬರುವುದಿಲ್ಲ. ಮನೆಗಾದರೂ ಹೋಗಿ ಏನಾದರೂ ಉದ್ಯೋಗ ಮಾಡು, ಮಗು." ಆ ವಿದ್ಯಾರ್ಥಿಗೆ ತುಂಬ ಬೇಜಾರಾಯಿತು. ಅಳುತ್ತಲೇ ಗುರುಕುಲವನ್ನು ಬಿಟ್ಟು ನಡೆದ. ದಾರಿಯಲ್ಲಿ ಹೋಗುತ್ತಿರುವಾಗ ಒಂದು ವಿಚಾರ ಅವನ ಮನಸ್ಸಿಗೆ ಬಂತು: "ದೇವರು ನನ್ನ ಕೈಯಲ್ಲಿ ವಿದ್ಯಾರೇಖೆ ಬರೆಯಲಿಲ್ಲ. ನಾನೇ ಬರೆದುಕೊಂಡರೆ ಹೇಗೆ?" ಅವನು ಒಂದು ಚಾಕುವನ್ನು ತೆಗೆದುಕೊಂಡು, ತನ್ನ ಕೈಯಲ್ಲಿ ಒಂದು ಗೆರೆಯನ್ನು ಎಳೆದುಕೊಂಡ. ನೋವಾಯಿತು, ರಕ್ತ ಬಂತು. ಹಾಗೇ ಗುರುಕುಲಕ್ಕೆ ವಾಪಸ್ಸು ಬಂದ.

ಕೈಯನ್ನೆಲ್ಲ ರಕ್ತ ಮಾಡಿಕೊಂಡು ಬಂದ ಆ ಹುಡುಗನನ್ನು ಕಂಡು, ಗುರುಗಳಿಗೆ ಗಾಬರಿಯಾಯಿತು. "ಇದೇನಪ್ಪಾ?" ಎಂದರು. ಅದಕ್ಕೆ ಅವನು, "ಗುರುಗಳೇ, ನೀವು ನನ್ನ ಕೈಯಲ್ಲಿ ವಿದ್ಯಾರೇಖೆ ಇಲ್ಲವೆಂದು ಹೇಳಿದ್ದಿರಿ. ಇದೋ 'ವಿದ್ಯಾರೇಖೆ' " ಎಂದು ತಾನು ಕೈಯ ಮೇಲೆ, ಚಾಕುವಿನಿಂದ ಮಾಡಿಕೊಂಡಿದ್ದ ಗೆರೆಯನ್ನು ತೋರಿಸಿದ. ಗುರುಗಳಿಗೆ ಅವನ ಆಸಕ್ತಿಯನ್ನು ನೋಡಿ ಸಂತೋಷವಾಯಿತು. ರಕ್ತ ಸೋರುತ್ತಿರುವುದನ್ನು ಕಂಡು ದುಃಖವೂ ಆಯಿತು. ಅವನ ಗಾಯಕ್ಕೆ ಔಷಧಿ ಹಾಕಿಸಿ ಪಟ್ಟಿ ಕಟ್ಟಿಸಿದರು. ಮತ್ತೆ ಅವನನ್ನು ಗುರುಕುಲಕ್ಕೆ ಸೇರಿಸಿಕೊಂಡರು. ಈಗ ಅವನು ತುಂಬು ಆಸಕ್ತಿಯಿಂದ ವಿದ್ಯೆಯನ್ನು ಕಲಿತ. ಸಂಸ್ಕೃತ ವ್ಯಾಕರಣದಲ್ಲಿ ಬಹು ದೊಡ್ಡ ಪಂಡಿತನಾದ. ವ್ಯಾಕರಣ ಸೂತ್ರಗಳನ್ನು ರಚಿಸಿದ. ಅವನೇ ಪಾಣಿನಿ ಮಹರ್ಷಿ.

ಆಸಕ್ತಿಯಿಂದ ಓದುವುದು ಎಂದರೆ ಹೇಗೆ? ಅದಕ್ಕಾಗಿ ಕೆಳಗಿನ ಅಂಶಗಳಿಗೆ ಗಮನ ಕೊಡುವುದು ಒಳ್ಳೆಯದು.


೧. ಕೇವಲ ಪರೀಕ್ಷೆಗಾಗಿ ಓದದೆ, **ಜ್ಞಾನ**ವನ್ನು ಗಳಿಸಲು ಓದಿ.

೨. ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳಬೇಕು ಎಂಬ **ಕಾತರ**ದಿಂದ, **ಕುತೂಹಲ**ದಿಂದ ಓದಿ.

೩. ಯಾವುದೇ ಒತ್ತಡಕ್ಕೆ ಒಳಗಾಗದೆ **ಸಂತೋಷ**ದಿಂದ ಓದಿ.

೪. ಕೇವಲ ನಿಮ್ಮ ತಂದೆ ತಾಯಿ, ಶಿಕ್ಷಕರು, ಸಹಪಾಠಿಗಳು – ಇವರು ಹೇಳುತ್ತಾರೆಂದು ಓದಬೇಡಿ. ನಿಮ್ಮ ಒಳಗಿನಿಂದಲೇ ನಿಮಗೆ ಸ್ಫೂರ್ತಿ ಬರಲಿ. ಇದನ್ನು **ಸ್ವಯಂಸ್ಫೂರ್ತಿ** ಎನ್ನುತ್ತಾರೆ.

ಇದೇ ಓದುವುದರ ರಹಸ್ಯ. ನಮಗೆ ಏನೂ ತಿಳಿದಿಲ್ಲವೆಂದು ಯಾವತ್ತೂ ಅಂದುಕೊಳ್ಳಬಾರದು. ಜ್ಞಾನವೆಂಬುದು ಮನುಷ್ಯನಲ್ಲಿಯೇ ಅಡಗಿರುವುದು ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅವರು ಹೇಳುತ್ತಾರೆ: "ಜಗತ್ತು ಗಳಿಸಿರುವ ಜ್ಞಾನವೆಲ್ಲವೂ ಮನಸ್ಸಿನಿಂದಲೇ ಬಂದುದು. ಜಗತ್ತಿನ ಅನಂತ ಪುಸ್ತಕ ಭಂಡಾರವೆಲ್ಲ ಮನಸ್ಸಿನಲ್ಲಿಯೇ ಇದೆ."



# ಬಸವಣ್ಣನವರ ಆತ್ಮಪರಿಶೀಲನೆ

ಸ.ಸ. ಮಾಳವಾಡ

**ಮನುಷ್ಯನು ತನ್ನ ಜೀವನದಲ್ಲಿ ತಪ್ಪುಗಳನ್ನು ಮಾಡುವುದು ಸಹಜ. ಆದರೆ ಸಾಧಕನಾದವನು ಅವನ್ನು ಒಪ್ಪಿಕೊಂಡು, ದೌರ್ಬಲ್ಯಗಳನ್ನು ನಿವಾರಿಸೆಂದು ಭಗವಂತನನ್ನು ಬೇಡಿಕೊಳ್ಳಬೇಕು; ಆತ್ಮನಿವೇದನೆಯನ್ನು ಮಾಡಬೇಕು. ಬಸವಣ್ಣನವರ ಹಲವಾರು ವಚನಗಳು ಈ ವಿನಯ ಹಾಗೂ ಶರಣಾಗತಿಯ ಭಾವವನ್ನು ಬಿಂಬಿಸುತ್ತವೆ. ಅವುಗಳ ಸೋದಾಹರಣ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕರು ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದರು.**

**ಮಾ**ನವನಲ್ಲಿ ಲೋಪದೋಷಗಳಿರುವುದು ಸಹಜ. ಇದರಿಂದಾಗಿ ಮಾನವನು ತಪ್ಪು ಮಾಡುತ್ತಾನೆ. ಆದರೆ ಅಹಂಕಾರಕ್ಕೊಳಗಾದ ಸಾಮಾನ್ಯ ಮಾನವನು ತನ್ನ ತಪ್ಪುಗಳನ್ನು ಕಂಡುಕೊಳ್ಳುವುದಿಲ್ಲ. ದೈವೀಪಥದ ಸಾಧಕರು ಮಾನಸಿಕ ಸ್ತರದ ತಮ್ಮ ತಪ್ಪುಗಳನ್ನು ಗುರುತಿಸಿಕೊಳ್ಳುತ್ತಾರೆ. ಅವುಗಳನ್ನು ಮುಚ್ಚುಮರೆಯಿಲ್ಲದೆ ಒಪ್ಪಿಕೊಳ್ಳುತ್ತಾರೆ. ಆತ್ಮಪರಿಶೀಲನೆಯಿಂದ ತಮ್ಮ ದೌರ್ಬಲ್ಯಗಳನ್ನು ಅರಿತುಕೊಂಡು ಪರಮಾತ್ಮನಲ್ಲಿ ನಿವೇದಿಸುತ್ತಾರೆ. ಅವುಗಳನ್ನು ಮೀರಿ ನಿಲ್ಲುವಲ್ಲಿ ಪರಮಾತ್ಮನ ಕೃಪೆಗಾಗಿ ಆತನನ್ನು ಅನನ್ಯವಾಗಿ ಆರ್ತರೀತಿಯಿಂದ ಪ್ರಾರ್ಥಿಸುತ್ತಾರೆ. ಆತ್ಮಪರಿಶೀಲನೆಯ ನಿಲವಿನಲ್ಲಿದ್ದ ಬಸವಣ್ಣನವರ ವಾಣಿಯು ಹರಿದುಬಂದ ಬಗೆ ಇಂತಿದೆ:

**ತಪ್ಪೆನ್ನದು ತಪ್ಪೆನ್ನದು**
**ತನುಮನಧನದಲ್ಲಿ ಮಾಟಕೂಟವೆಂದರಿಯದ**
**ತಪ್ಪೆನ್ನದು ತಪ್ಪೆನ್ನದು**

ತನುಮನಧನಗಳನ್ನು ಪರಶಿವನಿಗಾಗಿ, ಶಿವನ ಶರಣರಿಗಾಗಿ ವಿನಿಯೋಗಿಸದೆ ಇದ್ದ ಸ್ಥಿತಿಯನ್ನಿಲ್ಲಿ ಪ್ರಾಂಜಲವಾಗಿ ಒಪ್ಪಿಕೊಳ್ಳಲಾಗಿದೆ:

**ಆನು ಪಾಪಿಯಯ್ಯ, ಆನು ಕೋಪಿಯಯ್ಯ**
**ತರಳತನದಲ್ಲಿ ಕೆಟ್ಟೆನಯ್ಯ**
**ಭಕ್ತಿಮುಕ್ತಿಯ ಹೊಲಬ–**
**ನರಿಯದೆ ಆನು ಮರುಳಾದೆನಯ್ಯ**

ಭಕ್ತಿಭಂಡಾರಿಯಾಗಿ ರೂಪುಗೊಂಡ ಬಸವಣ್ಣನು ತನ್ನ ಪೂರ್ವದ ಸ್ಥಿತಿಯನ್ನು ಇಲ್ಲಿ ಬಣ್ಣಿಸಿದ್ದಾನೆ. ತಾನು ಕೋಪಿಷ್ಠ, ಚಂಚಲ ಸ್ವಭಾವದವನು, ಭಕ್ತಿಯ ಹೊಲಬನ್ನರಿಯದವ ಎಂಬುದಾಗಿ ಹೇಳಿಕೊಂಡಿದ್ದಾನೆ. 'ಕಡೆಯಿಲ್ಲದ ಹುಸಿಯೆನ್ನದು' ಎಂದೂ ಒಂದು ಕಡೆ ಹೇಳಿಕೊಂಡಿದ್ದಾನೆ. ಹೀಗೆ ತನ್ನ ದೋಷಗಳನ್ನು ಹೇಳಿಕೊಳ್ಳುವುದು ಸಾಮಾನ್ಯ ಮಾನವನಿಗೆ ಸಾಧ್ಯವಿಲ್ಲ. ಕಾರ್ಯಸಾಧನೆಗೆಂದು ವಂಚಕತನ ತೋರುವವರ, ಇಲ್ಲವೇ ದೈನ್ಯದಿಂದ ಇತರರನ್ನು ಯಾಚಿಸುವವರ ಮಾತು ಬೇರೆ. ತನ್ನ ಲೋಪದೋಷಗಳನ್ನು ಗುರುತಿಸಿಕೊಂಡು ಅವುಗಳನ್ನು ಮೀರಿ ಮೇಲಕ್ಕೇರಬೇಕೆನ್ನುವ ಸಾಧಕರು ಮಾತ್ರ ಹೀಗೆ ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುತ್ತಾರೆ.

ಹೀಗೆ ಒಪ್ಪಿಕೊಳ್ಳುವಲ್ಲಿ ಅವರ ಹಿರಿಮೆಯು ವ್ಯಕ್ತವಾಗುತ್ತದೆ.

"ಎನ್ನ ತಪ್ಪು ಅನಂತಕೋಟಿ, ನಿಮ್ಮ ಸೈರಣೆಗೆ ಲೆಕ್ಕವಿಲ್ಲ" ಎಂದು ಹೇಳುವಲ್ಲಿ ಬಸವಣ್ಣನವರು ತಮ್ಮ ತಪ್ಪುಗಳನ್ನು ಕ್ಷಮಿಸುವಲ್ಲಿ ಪರಮಾತ್ಮನ ಸೈರಣೆಯನ್ನು ಅರಿತುಕೊಂಡಿದ್ದಾರೆ. ಇನ್ನುಮುಂದೆ ಅಂತಹ ತಪ್ಪುಗಳನ್ನು ಮಾಡಬಾರದೆಂಬ ನಿರ್ಧಾರವನ್ನು ಕೈಕೊಳ್ಳುತ್ತಾರೆ. ಈ ನಿರ್ಧಾರ ಕೈಗೂಡುವುದಕ್ಕೆ ಪರಮಾತ್ಮನ ಕೃಪೆ ಬೇಕು. ಅದಕ್ಕೆಂದು ಪರಶಿವನಿಗೆ ಮೊರೆ ಹೋಗಬೇಕು.

**ಮತಿಮಂದನಾಗಿ ಗತಿಯ ಕಾಣದೆ ಇರ್ದೆನಯ್ಯ**
**ಹುಟ್ಟುಗುರುಡನ ಕಯ್ಯ ಕೋಲು ಕೊಟ್ಟು ನಡೆಸುವಂತೆ**
**ನಡೆಸಯ್ಯ ಎನ್ನಾ**

ಮಂದಮತಿಯಾಗಿ ದಾರಿ ಕಾಣದೆ, ಹುಟ್ಟುಗುರುಡನಂತಿರುವ ಮಾನವನ ಕೈಯಲ್ಲಿ ಕೋಲು ಕೊಟ್ಟು ನಡೆಸುವ ಹೊಣೆ ಪರಶಿವನದು. ಭೂಮಿಯಲ್ಲಿ ಕಸ ಹುಟ್ಟಿದಾಗ ಬೆಳೆಯು ಸುಳಿದೆಗೆದು ಹೊರಹೊಮ್ಮಲಾರದು. ವಿಕಾಸ ಹೊಂದಬೇಕಾದ ಮಾನವನ ಅವಗುಣಗಳು ಬೆಳೆಯುವ ಭೂಮಿಯಲ್ಲಿ ಕಸ ವಿದ್ದಂತೆ. ಮಾನವ ಅವಗುಣವೆಂಬ ಕಸವನ್ನು ಕಿತ್ತು ಸಲಹುವ ಹೊಣೆ ಕೂಡಲಸಂಗಮದೇವನದು. ಏಕೆಂದರೆ ಹುಟ್ಟಿಸಿದ ಹೊಣೆಯೂ ಆತನದೇ, ಪರೀಕ್ಷೆಗೆ ಒಡ್ಡುವ ಲೀಲೆಯೂ ಆತನದೇ.

**ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ**
**ಇಳಿಯಬಿಟ್ಟೊಡೆ ನಿಮ್ಮ ನಗುವರಯ್ಯ**
**ಶಿವಬಟ್ಟೆಯೊಳೆನ್ನನು ಇರಿಸಯ್ಯ**
**ಹರನೇ ಹೊಲಬುಗೆಟ್ಟೆನು,**
**ಬಟ್ಟೆಯ ತೋರಯ್ಯಾ, ಹುಯ್ಯಲಿಟ್ಟೆನು, ಗಣಂಗಳು**
**ಕೇಳಿರಯ್ಯಾ; ಕೂಡಲಸಂಗಮದೇವಯ್ಯನೆನ್ನ ಕಾಡಿಹೆನಯ್ಯಾ**

ಹೊಲಬುಗೆಟ್ಟ ಮಾನವನನ್ನು ಶಿವಪಥದಲ್ಲಿ ಇರಿಸುವ ಹೊಣೆಯನ್ನು ಹರನು ಹೊತ್ತುಕೊಳ್ಳುತ್ತಾನೆ. ಆದರೆ ಮಾನವನು ಅನನ್ಯವಾಗಿ ಹರನಿಗೆ ಶರಣುಹೋಗಬೇಕು. ಈ ದಿಸೆಯಲ್ಲಿ ಬಸವಣ್ಣನವರ ಆರ್ತ ದನಿ ಹೀಗೆ ಹೊರಹೊಮ್ಮಿದೆ:

**ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ**
**'ಅಂಬೇ, ಅಂಬೇ' ಎಂದು ಕರೆಯುತ್ತಲಿದ್ದೇನೆ**
**'ಅಂಬೇ, ಅಂಬೇ' ಎಂದು ಒರಲುತ್ತಲಿದ್ದೇನೆ**
**ಕೂಡಲಸಂಗಮದೇವ 'ಬಾಳು ಬಾಳೆಂ'ಬನ್ನಕ್ಕ**

ಅಡವಿಯಲ್ಲಿ ದಾರಿತಪ್ಪಿದ ದನ 'ಅಂಬಾ' ಎಂದು ಕೂಗಿಡುತ್ತದೆ. ಅಂತೆಯೇ ದೋಷದೌರ್ಬಲ್ಯಗಳಿಂದ ಕೂಡಿದ ಮಾನವನು ಪರಶಿವನ ಕೃಪೆಗಾಗಿ ಕೂಗಬೇಕಾಗುತ್ತದೆ. "ಅಯ್ಯಾ, ಅಯ್ಯಾ" ಎಂದು ಕೂಗಿದಾಗ ಕೆಲಕಾಲ ಕೂಡಲಸಂಗಮದೇವನು ಮೌನವಾಗಿಯೂ ಇರಬಹುದು. ಆದರೆ ನಿಷ್ಠೆಯನ್ನು ಗಟ್ಟಿಗೊಳಿಸಿಕೊಂಡು ಮತ್ತೆ ಮತ್ತೆ ಕರೆದಾಗ ಪರಶಿವನ ಒಲುಮೆ ಸಾಧ್ಯವಾಗುತ್ತದೆ. ಕೂಡಲಸಂಗಮದೇವ ನಮ್ಮನ್ನು ಶಿವಪಥದಲ್ಲಿ ಇರಿಸುತ್ತಾನೆ. ಹಾಗಾಗುವುದಕ್ಕೆ ಮೊದಲು, 'ಬಲೆಗೆ ಬಿದ್ದ ಮೃಗದಂತೆ ದೆಸೆದೆಸೆಗೆ ಬಾಯಿ ಬಿಡುತಿರುವ' ಸಂದರ್ಭವನ್ನೂ ಎದುರಿಸಬೇಕಾಗುತ್ತದೆ. ಬಡಪಶು ಪಂಕದಲ್ಲಿ ಬಿದ್ದಾಗ ಕಾಲುಬಡಿಯುತ್ತ ನಿಸ್ಸಹಾಯಕ ಸ್ಥಿತಿಯಲ್ಲಿದ್ದರೂ ಒಡೆಯ ಬಂದು ಅದನ್ನು ಬಿಡಿಸಿಕೊಂಡು ಹೋಗುತ್ತಾನೆ. ಅದರಂತೆ ಮಾನವನನ್ನು ಶಿವಪಾದದಲ್ಲಿರಿಸುವ ಹೊಣೆಯನ್ನು ಪರಶಿವನು ಹೊತ್ತುಕೊಳ್ಳುತ್ತಾನೆ. ಆದರೆ ಅದಕ್ಕೆ ನಾವು ಅನನ್ಯವಾಗಿ ಆತನಿಗೆ ಶರಣುಹೋಗುವುದು ಮಾತ್ರ ಅವಶ್ಯಕವಾಗುತ್ತದೆ.

ಮಾನವನು ಪಶು; ಪರಶಿವ ಪಶುಪತಿ. ತುಡುಗುಣಿ ದನದ ಅಪವಾದವನ್ನು ಒಡೆಯನೇ ಹೊತ್ತುಕೊಳ್ಳಬೇಕಾಗುತ್ತದೆ. ಅಂತೆಯೇ ದನದ ತುಡುಗುಣಿತನವನ್ನು ಆತನು ಬಿಡಿಸಬೇಕಾಗುತ್ತದೆ. ಪಶುವು ತನ್ನ ಒಡೆಯನನ್ನು ನಂಬಬೇಕು. ಆಗ ಅವನು ತಾಯಾಗಿ ತಂದೆಯಾಗಿ ಸಕಲಬಂಧುಬಳಗವಾಗಿ ಮಾನವನನ್ನು ರಕ್ಷಿಸುತ್ತಾನೆ.

ಪರಶಿವನ ಕರುಣೆ ಒದಗಿಬರುವುದಕ್ಕೆ ಸಾಕಷ್ಟು ಕಾಲವೂ ಬೇಕು. ಅಲ್ಲಿಯವರೆಗೆ ಅಂತಹ ಕರುಣೆಗಾಗಿ ಹಾತೊರೆಯುತ್ತಿರಬೇಕು. ಪ್ರಾರ್ಥನೆಯಲ್ಲಿ ತೊಡಗಬೇಕು. ಪ್ರಾರ್ಥನೆಗೆ ಸಂಗೀತಶಾಸ್ತ್ರವೇ ಬೇಕೆಂದೇನೂ ಇಲ್ಲ. ತನಗೆ ತಿಳಿದಂತೆ ಪ್ರಾರ್ಥನೆಗೈಯಬಹುದು. 'ಆನೊಲಿದಂತೆ ಹಾಡುವೆ' ಎಂದು ಸಾಗಬಹುದು. ನಮ್ಮಲ್ಲಿ ಎಷ್ಟೇ ದೋಷವಿದ್ದರೂ ಪರಶಿವನು ತನ್ನ ಉತ್ತಮಿಕೆಯನ್ನು ತೋರಿಸುತ್ತಾನೆ. ನಮ್ಮ ಲೋಪ–ದೋಷಗಳ ಅರಿವನ್ನು ನಮಗೆ ಮಾಡಿಕೊಡುತ್ತಾನೆ. ಪರಶಿವನ ಕೃಪೆಯೊದಗಿ ಬರುವ ಬಗೆಗೆ ನಮ್ಮಲ್ಲಿ ಸಂದೇಹವು ಸುಳಿಯಬಹುದು. ಶಿವಪಥವು ಸಾಧ್ಯವಾಗುವ ಬಗೆಗೆ ನಿರಾಶೆ ತಲೆದೋರಬಹುದು. ಆದರೆ ನಿಷ್ಠೆಯಿಂದ ಭಕ್ತಿಪಥದಲ್ಲಿ ಮುಂದೆ ಸಾಗಬೇಕಾಗುತ್ತದೆ. ತಾಮಸದಿಂದ, ಕಾಮದಿಂದ ಭಕ್ತಿ ನೆಲೆಯೂರಿ ನಿಲ್ಲದೆ ಇರಬಹುದು. ಸಾಂಸಾರಿಕ ಜೀವನದಲ್ಲಿ ಉದರಕ್ಕೆ ಕುದಿಯುವಾಗ ನಾವು ಶಿವಪಥದಿಂದ ದೂರ ಸರಿಯಬಹುದು. ತನು–ಲೋಭ, ಮನ–ಲೋಭ, ಧನ–ಲೋಭಗಳು ಮುಂದುಗೆಡಿಸಿ ನಮ್ಮನ್ನು ಕಾಡಬಹುದು. ಇಲ್ಲವೆ ಭಕ್ತಿಯನ್ನು ಆಚರಿಸುತಿದ್ದೇನೆಂಬ ಅಹಂಕಾರಕ್ಕೆ ನಾವು ಒಳಗಾಗಬಹುದು. ಒಡಲು, ಒಡವೆ, ಅರ್ಥ – ಇವೆಲ್ಲವೂ ಪರಶಿವನಿಂದಲೇ ಬಂದವುಗಳೆಂಬುದನ್ನು ಅರಿಯದೆ ಭ್ರಾಂತಿಗೆ ಒಳಗಾಗಬಹುದು. ಮಾನವನು, ಕೇಡುವ ಕೇಡಿಂಗೆ ಕಡೆಯಿಲ್ಲದ ಸ್ಥಿತಿಯೂ ತಲೆದೋರಬಹುದು. ತನ್ನನ್ನು ತಾನೇ ವಂಚಿಸಿಕೊಳ್ಳುವ ದುರ್ಭರ ಸನ್ನಿವೇಶವಿರಬಹುದು. ನೆತ್ತಿಯಲ್ಲಿ ಅಲಗನ್ನು ತಿರುಹುವಂತಹ, ಕೊಯಿದ ಮೂಗಿಗೆ ಕನ್ನಡಿಯನ್ನು ತೋರುವಂತಹ ವೇದನೆಯ ಅನುಭವವೂ ಆಗಬಹುದು. ತನಗೆ ಆರೂ ಇಲ್ಲದೆ ಅನಾಥನೆಂಬ ಭಾವನೆ ಸುಳಿಯಬಹುದು. ಆಗ ಕೂಡಲಸಂಗಮದೇವನಿಗೆ ಅನನ್ಯವಾಗಿ ಶರಣುಹೋಗುವುದೊಂದೇ ಹಾದಿ. ನಿಷ್ಕರುಣಿಯಂತೆ ಕಾಣುವ ಪರಶಿವನು ನಮ್ಮ ನಿಷ್ಠೆಯನ್ನು ಪರೀಕ್ಷಿಸುತ್ತಾನೆ. ನಮ್ಮ ನಿಷ್ಠೆ ಅಚಲವಾಗಿದ್ದರೆ ಆತನ ಕರುಣೆ ನಮ್ಮತ್ತ ಹರಿದು ಬರುತ್ತದೆ.